ತಾರೀಖು 22ನೆ ಜನವರಿ 1907.

ನಂ. ಲೆ. 7005—ಭ್ಯಾ. ರೆ. 412-06-2, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್ದಾರ್ ಮಿ॥ ವಿ. ಗೋಪಾಲರಾವ್, ಬಿ. ಎ. ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯ ಮೇರೆಗೆ, ಅವರು ಉಪಯೋಗಿಸಿಕೊಳ್ಳುವ ತಾ ರೀಖಿನಿಂದ ಒಂದು ತಿಂಗಳೂ 26 ದಿವಸಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

2. ಮಿ॥ ಗೋಪಾಲರಾಯರು ರಜಾ ಮೇಲೆ ಇರುವವರೆಗೆ ಅಥವಾ ಮತ್ತೊಂದು ಹುಕ್ಕುಂ ಕೊಡುವವರೆಗೆ, ನೆಲಮಂಗ ಲದ ತಾಲ್ಲೂಕು ಸರಸ್ತೆದಾರ್ ಮಿ॥ ಸಿ. ಕಾಶಿನಾಥರಾಯರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡುವರು.

ತಾರೀಖು 31ನೆ ಜನವರಿ 1907.

ನಂ. ಪೈ. 5983—ಜ. ಪೈ. 101-06-6, ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮಿ॥ ಟಿ. ವೈಯಾಪುರಿ ಶೆಟ್ಟರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯ ಮೇರೆಗೆ, 1907ನೆ ಇಸವಿಯ ಜನವರಿ 12ನೆ ತಾರೀಖಿನಿಂದ ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಿ॥ ಟಿ. ವೈಯಾಪುರಿ ಶೆಟ್ಟರು ರಜಾಮೇಲೆ ಇರುವವರೆಗೆ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ, ಕಂಟ್ರೋಲರ ವರ ಆಜ್ಞೇರಿಯ ಸೀನಿಯರ್ ಎಗ್ಜಾಮಿನರ್ ಮಿ॥ ಜೆ. ವಾಟರ್ಜ್‌ರವರು ಕಂಟ್ರೋಲರವರ ಚೀಫ್ ಅಸಿಸ್ಟೆಂಟರ ಕೆಲಸಗಳ ಚಾರ್ಜಿ ನಲ್ಲಿರುವರು.

ತಾರೀಖು 31ನೆ ಜನವರಿ 1907.

ನಂ. ಆರ್. 7279—ವೆಲ್. ಆರ್. 433-06-3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನು ನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿಯ ವಿವರಿಸುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಕಾವೇರಿ ವೈದ್ಯುತಶಕ್ತಿ ಇಲಾಖೆಯ ಲೈನ್ಸ್ ಮೆಷಿನ್ ತಂತಿಗಳನ್ನು ನೋಡಿಕೊಳ್ಳುವ ಜನಗಳಿಗೆ ಒಂದು ಚಿಕ್ಕ ಮನೆಯನ್ನು ಕಟ್ಟುವುದಕ್ಕಾಗಿ ಅವಶ್ಯಕವಾಗಿದೆ, ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (ಬಿ) ಪ್ರಕರಣಗಳ ನ್ನನುಸರಿಸಿ ಕೋಲಾರ ಸಬ್ ಡಿವೀಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯ್ತು.	ಉದ್ದೇಶಿತ ಸರ್ಕಾರಿ ಕೆಲಸಕ್ಕೆ ಬೇಕಾಗುವ ವಿಸ್ತೀರ್ಣ.	ಚಕ್ಕುಬಂದಿ.			
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಕಾನಗಾನಹಳ್ಳಿ	ಹುರುಳಿಹಳ್ಳಿ	ಕಾಗಣ್ಣಿ (ಸರ್ವಾನ್ಯ) ಐತೇದಾರ (ಪಟೇತಿ) ಮುನಿರಾಯನ ಮಗ ನಾಗ.	361	ಖುಷ್ಕಿ	ಎ. ಗು. 0 10	ಸರ್ವೆ 361ನೆ ನಂಬರು	ಸರ್ವೆ 361ನೆ ನಂಬರು	ಸರ್ವೆ 362ನೆ ನಂಬರು	ಸರ್ವೆ 361ನೆ ನಂಬರು

ಕೆ. ಎಸ್. ಚಂದ್ರಶೇಖರ ಐಯ್ಯರ್, ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಬಮೋಜೇಬ್ ಹುಕುಂ,

ಪಬ್ಲಿಕ್ ವರ್ಕ್ಸ್ ಇಲಾಖೆ.

ಇನ್ಸ್ಪೆಕ್ಷನ್ ಹಾರ್ನಾಮೆ.

ತಾರೀಖು, 1ನೆ ಫೆಬ್ರವರಿ 1907ನೆ ಇಸವಿ.

ನಂ. 95-807, ವಾಟರ್ ಸಪ್ಲೈ ಮತ್ತು ಸ್ಯೂವರ್ಸ್ ಡಿವೀಜನ್‌ಗೆ ಸೇರಿದ ಅಸಿಸ್ಟೆಂಟು ಇಂಜನಿಯರ್ ಮೆ॥ ಕೆ. ಶ್ರೀನಿವಾಸ ಯ್ಯಂಗಾರ್ಯರವರಿಗೆ ಇದೇ ವ್ಹಾಪೆ 12ನೆ ತಾರೀಖು ಲಾಗಾಯಿತು 8 ದಿನಗಳು ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

ಹುಕ್ಕುಂ ಬಮೋಜೇಬ್,

ಎಂ. ಶಿಂಗಾರವೇಲೂ, ಫಾರ್ ಮೈಸೂರು ಗವರ್ನ್‌ಮೆಂಟು ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರಿಟರಿ.

ಮಿಲಿಟರಿ.

ಇನ್ಸ್ಪೆಕ್ಷನ್ ಹಾರ್ನಾಮೆ.

ತಾರೀಖು 5ನೆ ಫೆಬ್ರವರಿ 1907.

ನಂ. 2998-3000, ಮೈಸೂರು ಸೀಮೆಯ ಘನವನ್ನೆ ಬ್ರಿದ ಶ್ರೀಮ ಮಹಾರಾಜರವರು ಮೈಸೂರು ಬಾರ್ 3ನೆ ಪೈ ಪಟಾಲಮಿನೆಲ್ಲಿ 1907ನೆ ಇಸವಿ ಜನವರಿ 5ನೆ ತಾರೀಖು ಲಾಗಾಯಿತು ಇಬರಡೀ ಕಂಡ ಮೊಕರೂರಾತಿಯನ್ನು ಮಂಜು ಮಾಡಿರುತ್ತಾರೆ :—

ಹೆಸರು.	ಮೊಕರೂರು ಆದ ಹುದ್ದೆ.
ಕೇಪ್ಟ್ ಕೇಖ್ಯಿಸ್ಕ್ಯಾಯಿಲ್, ಸರ್‌ದಾರ್ ಬಹದ್ದೂರ್.	ಕುಮಂದ್ದಾ.

ಹುಕುಂ ಬಮೋಜೇಬ್,

ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್, ಮಿಲಿಟರಿ ಅಸಿಸ್ಟೆಂ